Reg.No. M. 1550.
KODAGU" MERCARA, (Coorg)

-38-

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೪-೮-೦.

ಸಂಪುಟ ೨೩ | ತಾರೀಕು ೨೭—೪—೧೯೪೫ನೇ ಶುಕ್ರವಾರ. | ಸಂಚಿಕೆ ೪೬

ಸ್ಯಾನ್‌ಫ್ರಾನ್ಸಿಸ್ಕೋ ಮತ್ತು ಗಾಂಧೀಜಿ.

'ಆಡಿದ ಆಥವಾ ಬರೆದ ಶಬ್ದಗಳಿಗಿಂತಲೂ ಮೌನವು ಹಿತಕರವಿರುವದೆಂಬುದು ನನಗೆ ಗೊತ್ತಿದ್ದರೂ ಈ ನಾಣ್ಣುಡಿಯ ಅನ್ವಯಕ್ಕೂ ಒಂದು ನಿರ್ದಿಷ್ಟವಾದ ಎಲ್ಲೆಯಿದೆ. ನ್ಯಾನ್‌ಫ್ರಾನ್ಸಿಸ್ಕೊ ಪರಿಷತ್ತು ಶೀಘ್ರದಲ್ಲಿಯೇ ಸಭೆಗೂಡಲಿದೆಯೆಂದು ಪ್ರಕಟವಾಗಿದೆ. ಆ ಸಭೆಯಲ್ಲಿ ಬರಬಹುದಾದ ವಿಷಯಗಳು ನನಗೆ ಗೊತ್ತಿಲ್ಲ. ಬಹುತರ ಹೊರಗಿನವರಾರಿಗೂ ಗೊತ್ತಿರಲಿಕ್ಕಿಲ್ಲ. ಆದೇನೇ ಇದ್ದರೂ ಈಗಿನ ಯುದ್ಧಾಂತ್ಯದ ನಂತರದ ಮೊದಲಾಟವಾಗಬೇಕಾದ ಜಗತ್ತಿನ ವಿಷಯವು ಅಲ್ಲಿ ಮಹತ್ವದ್ದಾಗುವದು. ಅಲ್ಲಿ ಚರ್ಚಿಸಲಾಗುವ ಈ ಜಾಗೃತಿಕ ಶಾಂತಿ ಸಂಘಟನೆಯ ಹಿನ್ನೆಲೆಯಲ್ಲಿ ಯುದ್ಧದ ಬೀಜಗಳಾದ ಅಪನಂಬಿಕೆ ಮತ್ತು ಭಯ ಇವು ಸುಳಿದಾಡುತ್ತಿವೆ. ಆದ ದರಿಂದ ಯುದ್ಧದ ವಿರುದ್ಧ ಶಾಶ್ವತಶಾಂತಿಯಲ್ಲಿ ಅಚಲ ಶ್ರದ್ಧೆಯುಳ್ಳ ನಾನು ಈ ವಿಷಯದಲ್ಲಿ ನನ್ನ ಮನೋಗತವನ್ನು ಹೇಳಬಯಸುತ್ತೇನೆ.

ಸಾರ್ವತ್ರಿಕ ವರ್ಣಸಮತ್ವ.

'ಯುದ್ಧ ಮತ್ತು ಅದರ ಬೀಜಗಳಾಗಿರುವ ಮೋಸ, ವಿಶ್ವಾಸ ದ್ರೋಹಗಳಲ್ಲಿಯ ಬಲದ ಮೇಲಿದ್ದ ತಮ್ಮ ಶ್ರದ್ಧೆಯನ್ನು ಕಿತ್ತೊಗೆದು ಎಲ್ಲ ವರ್ಣಗಳ ಮತ್ತು ರಾಷ್ಟ್ರಗಳ ಸಮಾನತೆಯ ತತ್ವದ ಮೇಲೆ ನಿರ್ಮಿಸಲ್ಪಟ್ಟ ನಿಜವಾದ ಶಾಂತಿಯ ಸ್ಥಾಪನೆಗಾಗಿ ಹೆಣಗದ ಹೊರತು ಸಂಯುಕ್ತ ರಾಷ್ಟ್ರಗಳಿಗಾಗಲೀ ವಿಶ್ವಕ್ಕಾಗಲಿ ಶಾಂತಿ ಲಭಿಸಲಾರದೆಂಬ ನನ್ನ ದೃಢನಂಬಿಕೆಯನ್ನು ನಾನು ಮತ್ತೊಮ್ಮೆ ಸಾರಿ ಹೇಳುತ್ತೇನೆ. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರವನ್ನು ಸುಲಿಯುತ್ತಿದ್ದರೆ ಅಥವಾ ಆಕ್ರಮಣ ಶೀಲವಾಗಿದ್ದರೆ ಜಗತ್ತಿನಲ್ಲಿ ಯುದ್ಧಗಳೇ ಆಗಬಾರದೆಂದು ಯತ್ನಿಸಿದರೆ ಶಾಂತಿ ಲಭಿಸಲಾರದು. 'ಇಂಥ ಜಗತ್ತಿನಲ್ಲಿ ಮಾತ್ರ ಸೈನಿಕ ಬಲದ ದೃಷ್ಟಿಯಿಂದ ದುರ್ಬಲವಿದ್ದ ರಾಷ್ಟ್ರಗಳು ಸುಲಿಗೆ ಅಥವಾ ಧಾಳಿಗಳ ಭೀತಿಯಿಂದ ಮುಕ್ತವಾಗಬಲ್ಲವು.

'(೧) ಶಾಂತಿಗಾಗಿ ಅತ್ಯಾವಶ್ಯಕ ಪೂರ್ವೋಪಾಯವೆಂದರೆ ಹಿಂದುಸ್ಥಾನದ ಸಂಪೂರ್ಣ ಸ್ವಾತಂತ್ರ್ಯ. ಯಾಕೆಂದರೆ ಭಾರತವು ಸಾಮ್ರಾಜ್ಯತೃಷ್ಣೆಯ ಒಂದು ಪ್ರಮುಖ ಉದಾಹರಣೆಯಾಗಿರುವದಿಷ್ಟೇ ಅಲ್ಲದೆ ಅದು ಮುಖ್ಯವಾಗಿ ೧೯೩೦ರಿಂದ ಕೇವಲ ಸತ್ಯ ಮತ್ತು ಅಹಿಂಸೆಗಳ ಮೇಲೆ ಅಚಲ ಶ್ರದ್ಧೆಯಿಟ್ಟು ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದೆ.

'ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಹೋರಾಡಿರದಿದ್ದರೂ ಹಿಂದೀ ಸೈನಿಕನು ಹಿಂದೆ ಎಂದೂ ತೋರಿಸದಿದ್ದ ಅತ್ಯುಚ್ಚ ತರಗತಿಯ ಸೈನಿಕನಲ್ಲಿರುವ ಹೋರಾಟದ ಗುಣಗಳಿಗೆ ಸಮಾನವಾದ ಗುಣಗಳು ತನ್ನಲ್ಲಿದ್ದುದನ್ನು ಈಗಿನ ಯುದ್ಧದಲ್ಲಿ ತೋರಿಸಿದ್ದಾನೆ. ಹಿಂದೀಯರಲ್ಲಿ ಸೈನಿಕರ ಗುಣಗಳಿಲ್ಲದಿರುವದರಿಂದ ಅವರೂ ಶಾಂತಿ ಸಂಗ್ರಾಮವನ್ನು ನಡೆಸಿಯಾರೆಂದು ಹೇಳುತ್ತಿರುವವರಿಗೆ ಉತ್ತರವೆಂದು ನಾನೂ ಈ ವಿಷಯವನ್ನು ಹೇಳುತ್ತಿದ್ದೇನೆ. ಇದರಿಂದ ಸಿದ್ಧವಾಗುವದೇನೆಂದರೆ ಶಕ್ತಿಯಂತರಲ್ಲಿಯೂ ಅಹಿಂಸೆಯೂ ಅವರಲ್ಲಿಯೂ ಹಿಂಸಾಶಕ್ತಿಗಿಂತಲೂ ಹೆಚ್ಚು ಸಾಮರ್ಥ್ಯವು ಳ್ಳದ್ದಾಗಿದೆ. ಹಿಂದುಸ್ಥಾನಕ್ಕೆ ಆ ತರಹದ ಅಹಿಂಸಾಶಕ್ತಿಯು ಇನ್ನೂ ಪೂರ್ಣ ಬಂದಿಲ್ಲವೆಂಬ ಹೊತು ಬೇರೆ. ಹೀಗಿದ್ದರೂ, ಸ್ವಾತಂತ್ರ್ಯಕ್ಕಾಗಿ ಅದು ಸಾಕಷ್ಟು ಯಶಸ್ವೀತೀಯಿಂದ ಅಂಹಿಸಾಮಯ ಹೋರಾಟ ನಡೆಸಿರುವದೆಂದು ಹೇಳಬಹುದು.

'(೨) ಹಿಂದುಸ್ಥಾನದ ಮುಕ್ತತೆಯು, ಆಕ್ರಮಣಕ್ಕೊಳಗಾದ ಪ್ರಪಂಚದ ಎಲ್ಲೆಲ್ಲಿ ಜನಾಂಗಗಳಿಗೂ, ಅವುಗಳ ಸ್ವಾತಂತ್ರ್ಯವು ಕೂಡ ಈರ ಸಮರ್ಪಿಸಿದೆಯೆಂದೂ ಮತ್ತು ಯಾವ ಸಂದರ್ಭದಲ್ಲಿಯೂ ಇನ್ನು ಮುಂದೆ ಅವುಗಳ ಸುಲಿಗೆಯಾಗಲಾರದೆಂದೂ ಸಿದ್ಧಮಾಡಿಕೊಡುತ್ತದೆ.

ನ್ಯಾಯಸಮ್ಮತ ಶಾಂತಿಗಾಗಿ.

'(೩) ಶಾಂತಿಯು ನ್ಯಾಯ ಸಮ್ಮತವಾಗಿರಬೇಕು. ಹಾಗಾಗಬೇಕಾದರೆ ಶಿಕ್ಷೆಯಿಂದಾಗಲಿ, ಸೇಡಿನ ಬುದ್ಧಿಯಿಂದಾಗಲಿ ಅಡಚನ್ನು ಹೇರಬಾರದು. ಜರ್ಮನಿ ಮತ್ತು ಜಪಾನಗಳನ್ನು ಛಲಿಸಬಾರದು. ಬಲಾಢ್ಯನಲ್ಲಿ ಸೇಡಿನ ಹವ್ಯಾಸವಿಲ್ಲುವದಿಲ್ಲ. ಆದುದರಿಂದ ಶಾಂತಿಯ ಫಲವು ಎಲ್ಲರಲ್ಲಿಯೂ ಹಂಚಲ್ಪಡಬೇಕು. ಅವರನ್ನು ಗೆಳೆತನದಲ್ಲಿಳೆದುಕೊಳ್ಳುವದೇ ಮುಂದಿನ ಪ್ರಯತ್ನವಾಗುವದು. ಮತ್ತಾವ ರೀತಿಯಿಂದಲೂ ಸಂಯುಕ್ತರಾಷ್ಟ್ರಗಳು ಪ್ರಜಾಸತ್ತೆಯನ್ನು ತೋರ್ಪಡಿಸಲಾರವು.

'(೪) ಇದರಿಂದ ಒಡೆದುಕಾಣುವದೇನೆಂದರೆ ಒತ್ತಾಯದಿಂದ ನಿಶ್ಶಸ್ತ್ರರನ್ನಾಗಿ ಮಾಡಲ್ಪಟ್ಟವರ ಮೇಲೆ ಶಸ್ತ್ರಸನ್ನದ್ಧ ಶಾಂತಿಯನ್ನು ಹೇರಲಿಕ್ಕಾಗುವದಿಲ್ಲ. ಶಾಂತಿಯ ಸುಲಭ ಕರಾರುಗಳನ್ನು ಕಾರ್ಯರೂಪದಲ್ಲಿ ತರಲು ಅಂತರ್ರಾಷ್ಟ್ರೀಯ ಪೊಲೀಸಪಡೆಯು ಆಸ್ತಿತ್ವದಲ್ಲಿ ಬರಬಹುದು. ಹೀಗೆ ಅಂತರ್ರಾಷ್ಟ್ರೀಯ ಪೊಲೀಸಪಡೆ ಇರುವದು ಸಹಿತ, ಶಾಂತಿಯ ದ್ಯೋತಕವಾಗಿರದೆ ಮಾನವ ದೌರ್ಬಲ್ಯಕ್ಕೊಂದು ಅವಕಾಶಕಲ್ಪಿಸಿಕೊಟ್ಟಂತಾಗುವದು.

'ಶಾಂತಿಯ ಈ ಮೂಲಭೂತ ತತ್ವಗಳು ಒಪ್ಪಿತವಾದರೆ, ಹಿಂದುಸ್ಥಾನದ ಪ್ರಾತಿನಿಧ್ಯವೆಂದು ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ನಿಯಮಿಸಲ್ಪಟ್ಟ ಹಿಂದೀಯರನ್ನು ತಿರುಗಿ ಕರೆಸಿಕೊಳ್ಳಬೇಕು.

ಹಿಂದುಸ್ಥಾನದ ಪ್ರಾತಿನಿಧ್ಯವನ್ನಿಡಬೇಕಾಗಿದ್ದರೆ ಈ ಸ್ಯಾನ್‌ಫ್ರಾನ್ಸಿಸ್ಕೋ ಪರಿಷತ್ತಿನಲ್ಲಿ ಜನತೆಯಿಂದ ಆರಿಸಲ್ಪಟ್ಟ ಪ್ರತಿನಿಧಿ ಇದ್ದರೆ ಇರಬೇಕು. ಇಲ್ಲವಾದರೆ ಅಲ್ಲಿ ಪ್ರಾತಿನಿಧ್ಯವಿರುವುದೇ ಜೋಡ.

ಆಗಸ್ಟ್ ಗೊತ್ತುವಳಿ.

'ತಾ. ೮ನೇ ಆಗಸ್ಟ್ ೧೯೪೨ನೇ ದಿನ ಅ. ಭಾ. ಕಾ. ಸಭೆಯಲ್ಲಾದ ಗೊತ್ತುವಳಿಯು ಕೆಳಗಿನ ಅಂಶದಲ್ಲಿ ಸ್ವತಂತ್ರ ಹಿಂದುಸ್ಥಾನದ ಉದ್ದೇಶವನ್ನು ಸ್ಪಷ್ಟಮಾಡುತ್ತದೆ:-

ಈಗಿನ ಗಂಡಾಂತರದ ಪರಿಸ್ಥಿತಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಪ್ರಮುಖವಾಗಿ ಹಿಂದುಸ್ಥಾನದ ಸ್ವಾತಂತ್ರ್ಯ ಮತ್ತು ಸಂರಕ್ಷಣೆಯಲ್ಲಿಯೇ ಆಸಕ್ತಿಯುಳ್ಳದಿದ್ದರೂ ಭವಿಷ್ಯತ್ಕಾಲದ ಶಾಂತಿ, ಸುರಕ್ಷಿತತೆ ಮತ್ತು ಪ್ರಪಂಚದ ನ್ಯಾಯವು ಬಹು ಉತ್ಕರ್ಷಕ್ಕಾಗಿ, ಬೇರಾವ ಯೋಜನೆಗಿಂತಲೂ ಇಂದಿನ ಜಾಗೃತಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲದಿರುವದರಿಂದ ಸ್ವತಂತ್ರರಾಷ್ಟ್ರಗಳ ಒಂದು ಜಾಗೃತಿಕ ಸಂಘವು ನಿರ್ಮಿಸಲ್ಪಡಬೇಕೆಂದೂ ಈ ಸಮಿತಿಯು ಅಭಿಪ್ರಾಯಪಡುತ್ತದೆ. ಈ ಸಂಘದ ಸದಸ್ಯರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆ; ಪರಚಕ್ರ ದಾಳಿ ಮತ್ತು ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರವು ಆಕ್ರಮಣ ಮಾಡುವದಕ್ಕೆ ಪ್ರತಿಬಂಧ; ರಾಷ್ಟ್ರೀಯ ಅಲ್ಪಸಂಖ್ಯಾಕರ ಹಿತಸಂರಕ್ಷಣೆ; ಹಿಂದುಳಿದ ಎಲ್ಲ ಭಾಗಗಳ ಮತ್ತು ಜನರ ಪ್ರಗತಿಯಾಗುವಂತೆ ಮಾಡೋಣ; ಮತ್ತು ಎಲ್ಲರ ಹಿತಕ್ಕಾಗಿ ಜಾಗತಿಕ ಸಂಪತ್ತಿಯ ಸಮೀಕರಣ; ಇವುಗಳನ್ನು ಈ ಜಾಗೃತಿಕ ಸಂಘವು ರಕ್ಷಿಸತಕ್ಕದ್ದು. ಈ ತರಹದ ಜಾಗೃತಿಕ ಸಂಘದ ನಿರ್ಮಾಣವಾದರೆ ಮುಂದೆ ಎಲ್ಲ ದೇಶಗಳಲ್ಲಿಯೂ ನಿಶ್ಶಸ್ತ್ರೀಕರಣವು ಯಶಸ್ವಿಯಾಗುವದಲ್ಲದೆ ರಾಷ್ಟ್ರೀಯ ಸೈನಿಕ, ನಾವಿಕ ಮತ್ತು ವೈಮಾನಿಕ ಬಲಗಳ ಅವಶ್ಯಕತೆ ಬೇಕಾಗಲಾರದು. ಮತ್ತು ಜಾಗೃತಿಕ ಸಂಘದ ಸಂರಕ್ಷಣಾ ಸೈನ್ಯವು ಜಾಗೃತಿಕ ಶಾಂತಿ ರಕ್ಷಣೆಮಾಡಬಲ್ಲದಲ್ಲದೆ ಏರಾಟಕೆಯನ್ನೂ ತಡೆಯುವುದು. ಇಂಥಾ ಜಾಗತಿಕ ಸಂಘದಲ್ಲಿ ಸ್ವತಂತ್ರ ಹಿಂದುಸ್ಥಾನವು ಆನಂದದಿಂದ ಸೇರುವದಲ್ಲದೆ ಸರಿಸಮಾನಸ್ಥಾನದ ಆಧಿಪತ್ಯದಿಂದ ಅಂತರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸುವದಲ್ಲಿ ಇತರ ದೇಶಗಳೊಡನೆ ಸಹಕರಿಸುವದು.'

ಅದಕ್ಕಾಗಿಯೇ ಹಿಂದುಸ್ಥಾನದ ಸ್ವಾತಂತ್ರ್ಯದ ಬೇಡಿಕೆಯು ಸ್ವಾರ್ಥದ್ದಾಗಿಲ್ಲದೆ ಹಿಂದುಸ್ಥಾನದ ರಾಷ್ಟ್ರೀಯತ್ವವೆಂದರೇ ಅಂತರ್ರಾಷ್ಟ್ರೀಯತ್ವವಾಗಿದೆ.'

'ಹ. ಗ.'

ನಂಬಿಕೆಗರ್ಹವಾದ ಸಂಖ್ಯೆಗಳು.

23ನೇ ತ್ರೈವಾರ್ಷಿಕ ಮೌಲ್ಯಗಣನೆ.

ಮೂರು ವರ್ಷಗಳ ಐನ್ ಲಾಭ 1,50,88,092.

ವಿಮಾದಾರರ ಕ್ಷೇಮನಿಧಿ 54 ಲಕ್ಷ ಸೇರಿಸಿದೆ.

ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%

ಎಂಡೋಮೆಂಟ್ .... 1000ಕ್ಕೆ ವರ್ಷಕ್ಕೆ 10½%

'ಓರಿಯಂಟಲ್'

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಸ್ಥಾಪನೆ ಭಾರತದಲ್ಲಿ 1874] [ಮುಖ್ಯ ಖಜೇರಿ—ಬೊಂಬಾಯಿ.

ಶಾಖೆ—'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು.

ಇನ್ಸ್‌ಪೆಕ್ಟರರ ಆಫೀಸು—ಕೆ. ಸದಾಶಿವ ರೋಡು, ಮಂಗಳೂರು.

ಕೊ ಡ ಗು

ತಾ. ೨೭-೪-೧೯೪೫ನೇ ಶುಕ್ರವಾರ

ಬರ್ಲಿನ್ ಕದನ.

ಜರ್ಮನಿಯ ಯುದ್ಧವು ಭೀಕರ ಮಟ್ಟಕ್ಕೆ ಬಂದು ತಲಪಿದೆ. ಪೂರ್ವಭಾಗ ದಿಂದ ಮುಂದರಿಯುತ್ತಿದ್ದ ರಷ್ಯಾ ಸೇನೆ ಗಳು ಬರ್ಲಿನ್ ಗಡಿಯನ್ನು ಭೇದಿಸಿ ಒಳ ನುಗ್ಗಿವೆ. ಆಜೇಯವೆಂದು ಒಂದು ಕಾಲಕ್ಕೆ ಪರಿಗಣಿಸಲ್ಪಟ್ಟಿದ ಜರ್ಮನಿಯೊಳ ಗೆ ಇಂದು ಶತ್ರುಗಳು ನುಗ್ಗಿದ್ದಾರೆ. ಜರ್ಮನರು ನಗರವನ್ನು ತ್ಯಜಿಸಿದೆ ತಮ್ಮ ಸರ್ವಶಕ್ತಿಯಿಂದ ಅದನ್ನು ರಕ್ಷಿಸುವ ಪ್ರಯತ್ನ ಮಾಡುತ್ತಿದ್ದಾರೆ. ಹಿಟ್ಲರನೇ ಸ್ವತಃ ಸೈನ್ಯಾಧಿಕಾರವನ್ನು ಕೈಯಲ್ಲಿ ತೆಗೆದು ಕೊಂಡು ಹೋರಾಡುತ್ತಿದ್ದಾನೆ. ಬಹು ಕರ್ಕಶವೀತಿಯ ಕದನವು ಇಲ್ಲಿ ನಡೆಯುತಿದೆ. ಬ್ರಿಟಿಷ್ ಮತ್ತು ಅಮೇರಿಕನ್ ದಂಡುಗಳು ಪಶ್ಚಿಮದಿಂದ ಒತ್ತರಿಸುತ್ತಿವೆ. ಬರ್ಲಿನ್ ನಗರದ ಮೇಲೆ ಧಾಳಿ ಮಾಡಿ ದಾಕ್ಷಣ ಜರ್ಮನ್ ಯುದ್ಧ ಮುಗಿದಂತಾಗಲಿಲ್ಲ. ಜರ್ಮನರು ಆಸ್ಟ್ರೀಯಾ ಮತ್ತಿತರ ಸುತ್ತಲಿನ ಕೆಲವು ಪ್ರದೇಶಗಳನ್ನು ಸೇರಿಸಿ ಹತ್ತು ಚದರ ಮೈಲು ವಿಸ್ತೀರ್ಣವಿರುವ ಕೋಟೆಯೊಂದನ್ನು ರಚಿಸಿದ್ದಾರಂತೆ. ಇದು ಬಹುಗೊಂಡಾರಣ್ಯದಿಂದ ಕೂಡಿದ್ದು ಸಂರಕ್ಷಕ ಯುದ್ಧ ಮಾಡಲು ಅನುಕೂಲವಾಗಿರುವದಂತೆ. ಆದ್ದರಿಂದ ಬರ್ಲಿನ್ ಮಿತ್ರಪಕ್ಷದವರ ವಶವಾದರೂ ಈ ಕೋಟೆಯೊಳಗೆ ನಿಂತು ಜರ್ಮನರು ಹೋರಾಡಬಹುದು.

ಮಿತ್ರಸೇನೆಗಳ ವಶವಾದ ಒಬ್ಬ ಜರ್ಮನ್ ಸೈನ್ಯಾಧಿಕಾರಿಯು ಜರ್ಮನರ ಮತ್ತೊಂದು ಗುಪ್ತಾಸ್ತ್ರದ ವಿಚಾರವನ್ನು ಹೊರಗೆ ತಂದಿದ್ದಾರೆ. ಇದನ್ನು ವಿ-4 ಎಂದು ಕರೆಯಲಾಗಿದೆ. ಇದು ವಿ-2 ಗಿಂಥಾ ವೇಗವಾಗಿ ಹೋಗುವದಲ್ಲದೆ ಪರಿಣಾಮಕಾರಿಯೂ ಹಾಗೆಯೆ ಯಾವದೇ ಸ್ಥಳದಿಂದ ಇದನ್ನು ಪ್ರಯೋಗಿಸಿದರೂ ಇದರ ಚಲನವನ್ನು ಟೆಲಿವಿಜನ್ ಮೂಲಕ ನಿಯಂತ್ರಿಸಿರುವದರಿಂದ ಬೇಕಾದಲ್ಲಿ ಬೀಳುವಂತೆ ಮಾಡುವದು ಸಾಧ್ಯವಿದೆಯಂತೆ. ಜರ್ಮನರು ಇದನ್ನು ಹೆಚ್ಚು ಸಂಖ್ಯೆಯಿಂದ ತಯಾರಿಸುವ ಯೋಜನೆಯನ್ನು ಕೈಕೊಂಡಿರುವರೆಂದೂ, ಇವುಗಳ ತಯಾರಿಕೆಯು ಭೂಗರ್ಭದಲ್ಲಿ ಆಳವಡಿಸಲ್ಪಟ್ಟಿರುವ ಕಾರ್ಖಾನೆಗಳಲ್ಲಿ ನಡೆಯುವದೆಂದೂ ಆತನು ಹೇಳಿರುವನು. ಜರ್ಮನರ ಗುಪ್ತಾಸ್ತ್ರಗಳ ವರ್ತಮಾನಗಳು ಆಗಿಂಡಾಗ್ಗೆ ಬರುತ್ತಿವೆ. ಇತ್ತೀಚೆಗೆ ವಾಚಕರಿಗೆ ಇವುಗಳ ವಿಚಾರ ಕೇಳಿ ಕೇಳಿ ಬೇಸತ್ತಿರಬಹುದು. ಆದರೂ ಕಡೆಯ ತನಕ ಜರ್ಮನರು ತಮ್ಮ ಗುಪ್ತಾಸ್ತ್ರದ ಜಾದು ವಿದ್ಯೆಯನ್ನು ಸಾರಿ ಜಗತ್ತನ್ನು ಮುಗ್ಧಗೊಳಿಸುತ್ತಿದ್ದಾರೆ.

ಇತ್ತಲಾಗಿ ಬಂದ ವಾರ್ತೆಯಂತೆ ಜರ್ಮನಿಯಲ್ಲಿ ಇನ್ನೂ ನೂರು ವಿಭಜನುಗಳಷ್ಟು ಸೇನೆಗಳು ಇರಬಹುದೆಂದು ಅಂದಾಜಾಗಿದೆ. ಆದರೆ ಬರ್ಲಿನ್ ಕದನ ಕ್ಷೇತ್ರದಲ್ಲಿ ಊಹಿಸಿದಷ್ಟು ವಿಶಾಲವಾದ ಸೇನೆಯಿಲ್ಲವೆಂದು ತಿಳಿದುಬಂದಿದೆ. ಕಾರಣ ಪರಿಶೀಲಿಸಿದವರು ಹೀಗೆ ಹೇಳಿದ್ದಾರೆ. ಜರ್ಮನರ ಮಹಾಸೇನೆಗಳಲ್ಲಿ ಕೆಲವು ನಾರ್ವೆ, ಸ್ಕ್ಯಾಂಡಿನೇವಿಯಗಳಲ್ಲಿ ಕೇಂದ್ರೀಕೃತವಾಗಿವೆಯಂತೆ. ಜರ್ಮನಿಯ ಅತ್ಯಂತ ಸುಸಜ್ಜಿತ ಸೇನೆಗಳು ಇಲ್ಲಿವೆಯಂತೆ. ಬರ್ಲಿನು ಮಿತ್ರರ ವಶವಾದರೂ ಇಲ್ಲಿ ನಿಂತು ಮಿತ್ರರನ್ನು ಎದುರಿಸುವ ಅಭಿಪ್ರಾಯವೂ ಜರ್ಮನರಲ್ಲಿದೆಯೆನ್ನಬಹುಷ.

ಜರ್ಮನಿಯು ಮೂದಂಯನ್ನನುಸರಿಸಿಯೇ ಜಪಾನರೂ ಕೂಡ ಗುಪ್ತಾಸ್ತ್ರಗಳ ಹೆಗ್ಗಳಿಕೆಯನ್ನು ಹೇಳುತ್ತಿದ್ದಾರೆ. ಅವರು ಒಂದು ರೀತಿಯ ವಿಮಾನವನ್ನು ತಯಾರಿಸಿ ಅದರಲ್ಲಿ ಬಾಂಬುಗಳನ್ನು ಹೇರಿಕೊಂಡು ಆಕಾಶದಿಂದ ಶತ್ರು ಹಡಗಗಳ ಮೇಲೆ ವಿಮಾನಸಮೇತ ಗುರಿತಪ್ಪದೆ ಬೀಳುವ ಏರ್ಪಾಡು ಮಾಡಿರುವರಂತೆ ಇದರಿಂದ ಒಬ್ಬ ವ್ಯಕ್ತಿಯು ನಾಶವಾಗುವದೇನೋ ಸಹಜ. ಆದರೆ ಇದು ಗುರಿತಪ್ಪದೆ ಬೀಳುವದರಿಂದ ಶತ್ರುಗಳಿಗೆ ವಿಪರೀತ ಹಾನಿಕಾರಕವಾಗಿದೆಯಂತೆ. ಜಪಾನರ ಈ ಉದ್ಯಮದಲ್ಲಿ ಕ್ಷಾರ್ಯದಕ್ಷತೆಯೊಂದಿಗೆ ಅವರ ಉಜ್ವಲ ರಾಷ್ಟ್ರಪ್ರೇಮದ ಉದಾಹರಣೆಯನ್ನು ನೋಡಬಹುದು. ಬೇಕೆಂತಲೇ, ತಿಳಿದು ಬಾಂಬುಗಳೊಡನೆ ಕೆಳಗೆ ಬಿದ್ದು ಪ್ರಾಣಬಿಡುವದು ಸಾಮಾನ್ಯ ಕೆಲಸವಲ್ಲ. ಇವರ ಈ ಸಾಹಸವು ಮಿತ್ರರ ಧಾಳಿಯು ಮುಂದೆ ಎಷ್ಟು ದಿನ ತಡೆಯುವದೊ ಗೊತ್ತಾಗದು.

ಜರ್ಮನಿಯು ಪತನವಾದ ನಂತರ ರಷ್ಯಾವು ಕೈಕೊಳ್ಳುವ ನೀತಿಯ ಮೇಲೆ ಯುದ್ಧದ ಭವಿಷ್ಯ ನಿರ್ಣಯವು ಬೇಗ ಆಗುವದು. ಜರ್ಮನಿಯು ಭೂಶಾಹಿಯಾದ ನಂತರ ರಷ್ಯನರು ಮಿತ್ರರೊಡಗೂಡಿ ಜಪಾನಿನ ಮೇಲೆ ಯುದ್ಧ ಹೂಡಿದ್ದರೆ ಯುದ್ಧವು ಹೆಚ್ಚು ಕಾಲ ನಡೆಯಲಿಕ್ಕಿಲ್ಲ. ಆದರೆ ಜಪಾನರ ಮೇಲೆ ಬೀಳುವ ತೀರ್ಮಾನವನ್ನು ರಷ್ಯನರು ಮಾಡುವರೋ ಇಲ್ಲವೋ ಎಂಬುದನ್ನು ಮುಂದೆ ನೋಡಬೇಕು.

ಈ ಮಧ್ಯೆ ಸ್ಯಾನ್‌ಫ್ರಾನ್ಸಿಸ್ಕೋ ಪರಿಷತ್ತು ಕೂಡಿದೆ. ಜಗತ್ತಿನ ವಿವಿಧಭಾಗದಿಂದ ಸಾವಿರಕ್ಕೂ ಮಿಕ್ಕಿ ಪ್ರತಿನಿಧಿಗಳು ಸೇರಿದ್ದಾರೆ. ಇವರಲ್ಲಿ ಹಿಂದೂದೇಶದ ಪರ ಬ್ರಿಟಿಷ್ ಸರಕಾರದಿಂದ ನೇಮಿಸಲ್ಪಟ್ಟ ಮೂರು ಜನರೂ ಇದ್ದಾರೆ. ಈ ಮಹಾಸಭೆಯಲ್ಲಿ ಜಗತ್ತಿನ ಭವಿಷ್ಯದ ಮಾತು ನಡೆಯಲಿದೆ. ಪರಾಜಯ ಹೊಂದಿದ ಜರ್ಮನಿಗೆ ಯಾವ ಉಪಚಾರಕೊಡಬೇಕು; ಜಪಾನಿನ ಬಗ್ಗೆ ಧೋರಣೆ ಹೇಗಿರಬೇಕು; ಜರ್ಮನಿಯು ಹಿಡಿತದಿಂದ ಬಿಡಲ್ಪಟ್ಟ ರಾಷ್ಟ್ರಗಳ ಭವಿಷ್ಯ ಇವೆಲ್ಲವುಗಳ ಚರ್ಚೆ ಇಲ್ಲಿ ನಡೆಯುವದು. ಯುದ್ಧದಲ್ಲಿ ಹೆಚ್ಚು ಶ್ರದ್ಧೆವಹಿಸಿ ಹೋರಾಡಿದ ರಷ್ಯಾ, ಬ್ರಿಟನ್, ಅಮೇರಿಕಗಳಿಗೆ ಸಂಧಾನದೆಯೇನು ಎಂಬುದೂ ಇಲ್ಲಿ ಚರ್ಚೆಯಾಗಬಹುದು. ಈ ಚರ್ಚೆಯಲ್ಲಿ ಮಿತ್ರರಾಷ್ಟ್ರಗಳು ಒಮ್ಮತದ ತೀರ್ಮಾನಕ್ಕೆ ಬರುವರೇ ನೋಡಬೇಕು.

ವರ್ತಮಾನ.

ಕೊಡಗು ನ್ಯಾಯವಿಥಾಯಕ ಸಭೆಗೆ ಯೂರೋಪಿಯನ್ ಮತದಾರರ ಕ್ಷೇತ್ರದಿಂದ ಮಿ. ಏವರ್ ಬುಲ್ ಮತ್ತು ಡಬ್ಲ್ಯೂ ಜಿ. ಪಾರ್ಸನ್ಸ್‌ರವರು ಸದಸ್ಯರಾಗಿ ಆರಿಸಿ ಬಂದಿದ್ದಾರೆ.

ಕೊಡಗು ಜಿಲ್ಲಾ ಬೋರ್ಡಿಗೆ ಯೂರೋಪಿಯನ್ ಮತದಾರ ಕ್ಷೇತ್ರದಿಂದ ಮಿಸೆಸ್ ಹೇಫ್ರೀಸ್ ಮತ್ತು ಡಬ್ಲ್ಯೂ ಜಿ. ಪಾರ್ಸನ್ಸ್‌ರವರು ಸದಸ್ಯರಾಗಿ ಆರಿಸಿ ಬಂದಿದ್ದಾರೆ.

ವಾರ್ಷಿಕ ಪದ್ಧತಿಯಂತೆ ವೀರಾಜಪೇಟೆ ಗುರುಸ್ವಾಮಿ ಆಶ್ರಮದಲ್ಲಿ ಮೇ ತಾ. 7 ನೇ ಸೋಮವಾರ ಉತ್ಸವವು ನಡೆಯುವದು. ಈ ಸಂದರ್ಭದಲ್ಲಿ ಭಜನೆ, ಹರಿಕಥೆ, ಸಂಗೀತ ಮೊದಲಾದುವುಗಳು ಏರ್ಪಾಡಿದೆ.

ಹೊಸದಾಗಿ ಏರ್ಪಡಿಸಿದ ಎರಡು ಸಹಕಾರ ಸಂಘಗಳ ಇನ್ಸ್‌ಪೆಕ್ಟರರ ಹುದ್ದೆಗೆ ಶ್ರೀ. ಮೂವೆಕ ಚಿಣ್ಣಪ್ಪನವರನ್ನೂ ಶ್ರೀ. ಚೋಡುಮಾಡ ಪೊನ್ನಪ್ಪನವರನ್ನೂ ನೇಮಿಸಿದ್ದು ಪೊನ್ನಪ್ಪನವರು ಹುದಿಕೇರಿಯಲ್ಲೂ ಚಿಣ್ಣಪ್ಪನವರು ಫ್ರೇಜರ್‌ಪೇಟೆಯಲ್ಲೂ ಮೇಲ್ಕಂಡ ಹುದ್ದೆಯ ಚಾರ್ಜ್ ವಹಿಸಿಕೊಳ್ಳಲಿರುವರು.

ತಾ. 14-5-45 ರಲ್ಲಿ ಕೌನ್ಸಿಲು ಚುನಾವಣೆ ನಡೆಯುವದರಿಂದ ಆ ದಿನವನ್ನು ಸಾರ್ವಜನಿಕ ರಜಾ ದಿನವೆಂದು ಸಾರಲಾಗಿದೆ.

ನಾಪೋಕ್ಲು ಬೆಂಚುಕೋರ್ಟಿನ ಸದಸ್ಯರಾಗಿ ಶ್ರೀಗಳಾದ ಕೋಟೆರ ಐಯ್ಯಪ್ಪ (ಅಧ್ಯಕ್ಷ) ಕುಲ್ಲೆಟಿರ ಅಚ್ಚಪ್ಪ, ಗುಡ್ಡೆರ ಗಣಪತಿ ಮತ್ತು ಕೋಡಿಮಣಿಯಂಡ ಮುತ್ತಪ್ಪ ಇವರನ್ನು ನೇಮಿಸಲಾಗಿದೆ.

ಪೊನ್ನಂಪೇಟೆ ಬೆಂಚುಕೋರ್ಟಿನ ಸದಸ್ಯರಾಗಿ ಶ್ರೀಗಳಾದ ಕಿರಿಯಬಡ ನಂಜಪ್ಪ (ಅಧ್ಯಕ್ಷ) ಪುಚ್ಚಿಮಾಡ ಮೂದಯ್ಯ, ಪಾರ್ವಂಗಡ ನಂಜಪ್ಪ, ಜಂಗಮರ ಸೋಮಯ್ಯ ಮತ್ತು ಮನೆಯಪಂಡ ಪುಟ್ಟಿಯಪ್ಪ ಇವರನ್ನು ಸದಸ್ಯರನ್ನಾಗಿ ಆರಿಸಲಾಗಿದೆ.

ವಿಜ್ಞಾಪನೆ.

ಕೊಡಗು ಶನಿವಾರಸಂತೆ ಹೋಬಳಿ ಓಟರುಗಳಲ್ಲಿ ವಿನಂತಿ.

ಮಹಾನೀಯರೇ,

ಇದೇ ಮೇ ತಾರೀಕು 21 ರಲ್ಲಿ ಇರುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಈ ಹೋಬಳಿ ಪಕವಾಗಿ ಎಸ್. ಎಂ. ಚನ್ನಬಸಪ್ಪನಾದ ನಾನು ನಿಂತಿರುವುದರಿಂದ ತಾವುಗಳು ತಮ್ಮ ಘನವಾದ ಒಂದು ಓಟನ್ನು ಧನ್ಯ ಪರವಾಗಿ ಕೊಟ್ಟು ತಮ್ಮಗಳ ಸೇವೆಯನ್ನು ಮಾಡಲಿಕ್ಕೆ ಅವಕಾಶವನ್ನು ವದಗಿಸಿಕೊಡಬೇಕಾಗಿ ಬೇಡುವ.

ಶನಿವಾರಸಂತೆ, ತಮುಗಳ ಸೇವಕ.
ಎಸ್. ಎಂ. ಚನ್ನಬಸಪ್ಪ.
23-4-45. 4-1

ಪೊನ್ನಂಪೇಟೆ ಶ್ರೀಮಂಗಲ ನಾಡು ಜಮ್ಮ ಓಟರುಗಳಲ್ಲಿ ವಿನಂತಿ.

ನಾನು ನಮ್ಮ ಪೊನ್ನಂಪೇಟೆ ಶ್ರೀಮಂಗಲ ನಾಡಿಗೆ ಜಮ್ಮ ಓಟರುಗಳ ಪ್ರತಿನಿಧಿಯಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿಗೆ ಒಬ್ಬ ಉಮೇದಾರನಾಗಿ ನಿಂತಿರುತ್ತೇನೆ. ತಮ್ಮೆಲ್ಲರ ಅಮೂಲ್ಯವಾದ ಓಟನ್ನು ನನಗೆ ತಾ. 14-5-1945 ರಲ್ಲಿ ಕೊಟ್ಟು ತಮ್ಮ ಸೇವೆಯನ್ನು ಕೌನ್ಸಿಲ್ ಮುಖಾಂತರ ಮಾಡುವುದಕ್ಕೆ ನನಗೆ ಅವಕಾಶ ಕೊಡಬೇಕಾಗಿ ಅತಿವಿನಯದಿಂದ ಪ್ರಾರ್ಥಿಸುತ್ತೇನೆ.

3-2 ಕೋಳೆರ ಕರುಂಬಯ್ಯ.

ವಿಜ್ಞಾಪನೆ.

ನಾಪೋಕ್ಲು ನಾಡು ಓಟರುಗಳಲ್ಲಿ ಬಿಟ್ಟೊಳಂಡ ಮಾಚಯ್ಯನ ವಿನಂತಿ.

ನಾಪೋಕ್ಲು ನಾಡಿನ ಪರ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಶ್ರೀ ನಡಿಕೇರಿಯಂಡ ಕೆ. ದೇವಯ್ಯನವರನ್ನು ಕಾಂಗ್ರೆಸು ಉಮೇದುವಾರನಾಗಿ ನಿಲ್ಲಿಸಿರುವುದರಿಂದ ಅವರಿಗೆ ವಿರೋಧ ಮಾಡುವ ಕಾಂಗ್ರೆಸು ಕೆಲಸಗಾರರಲ್ಲಿ ಒಬ್ಬನಾದ ನಾನು ಇಚ್ಚಿಸುವುದಿಲ್ಲವಾದ ಕಾರಣ ನಾನು ನನ್ನ ನೇ ಮಕವನ್ನು ವಾಪಾಸು ತೆಗೆದುಕೊಂಡಿರುತ್ತೇನೆ. ಹಯವಿಟ್ಟು ಓಟರುಗಳು ನನಗೆ ಓಟು ಕೊಡುವದು ಬೇಡವೆಂದು ನನ್ನ ವಿನಂತಿ.

ಬಲ್ಲಮಾವಟಿ. ಬಿ ಪಿ ಮಾಚಯ್ಯ.
24-4-45.

ಮಹಾಜನರಲ್ಲಿ ವಿನಂತಿ.

ಪೊನ್ನಂಪೇಟೆನಾಡು ಹೆಬ್ಬಾಲೆಗ್ರಾಮದಲ್ಲು ನನಗೆ ಭೂಮಿ ಇದೆ. ನನ್ನ ಭೂಮಿಯ ಮತ್ತು ತೋಡಿನ ಮಧ್ಯದಲ್ಲಿ ಮೂಯಮುಡಿಗೆ ಸೇರಿದ ಭೂಮಿ ಇದೆಯೆಂದು ಪೊಕ್ಕಲಿಗರ ಕಾಳಯ್ಯ ಗೌಡರೆಂಬುವವರು ವಿಕ್ರಯಿಸಲು ಪ್ರಯತ್ನಿಸುತ್ತಿರುತ್ತಾರೆ. ಈ ಭೂಮಿಯನ್ನು ನಾನು ಪಡಕೊಂಡು ಸಾಧಾರಣ 12 ವರ್ಷ ಲಾಗಾಯಿತು ಅನುಭವದಲ್ಲಿರುತ್ತೇನೆ. ಮತ್ತು ರೂಪಿಸಿರುತ್ತೇನೆ.

ಇದನ್ನು ಯಾರಾದರೂ ಕ್ರಯಕ್ಕೆ ಪಡಕೊಂಡಲ್ಲಾ ಮುಂದಕ್ಕೆ ತೊಂದರೆಗೆ ಕಾರಣವಾಗುತ್ತೆಂದು ಈ ಮೂಲಕ ತಿಳಿಸಿರುತ್ತೇನೆ.

ಜಿ. ಎ. ಸುಬ್ಬಯ್ಯ,
ಹೆಬ್ಬಾಲೆ ಗ್ರಾಮ,
ಗೋಣಿಕೊಪ್ಪ.

ಮತದಾರರೇ,

ದಯವಿಟ್ಟು ನಿಮ್ಮ ಓಟನ್ನು ನಿಮ್ಮದೇ ಸಂಸ್ಥೆಯೂಪ ಕಾಂಗ್ರೆಸಿಗೆ ಕೊಡಲು ಮರೆಯದಿರಿ.

The Canara Banking Corporation Ltd.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲದ ಪೊಟಲಗನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ ಈ ತನಕ ಕೊಡದೆ ಇರುವುದರಿಂದ ಸದರಿಯವರಿಗೆ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೆಲವು ವಿಳಾಸದಾರರು ಪತ್ತೆ ಇಲ್ಲವೆಂದೂ, ಕೆಲವು ವಿಳಾಸದಾರರು ಮೃತಪಟ್ಟರುವುದಾಗಿಯೂ ತಾತ್ಪಾಸು ಬಂದಿರುವುದರಿಂದ ಸದರಿ ಸಾಲಗಳಲ್ಲಿ ಜವಾಬ್ದಾರಿಗಳಾಗಿರುವ ನಗಗಳನ್ನು ಇದೇ ಕೀ ಕಾರೀಕು 26ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು.

ಸಾಲದ ನಂ.	ಸಾಲಗಾರರ ಹೆಸರು ಮತ್ತು ವಿಳಾಸ.	ಸಾಲದ ಮೊಬಲಗು.
199/41	ಕಡೇಮೊಡ ಪೂವಯ್ಯ, ಬೆಳ್ಯಪ್ಪನವರ ಮಗ, ಕುಂಡ ಗ್ರಾಮ, ಗೋಣಿಕೊಪ್ಪ,	ರೂ. 80—0—0
/42	ಕಾಡ್ಯಮೂಡ ಸೋಮಯ್ಯ, ಪೂಣಚ್ಚನವರ ಮಗ, ಶೆಟ್ಟಿಗೇರಿ, ಶ್ರೀಮಂಗಲ,	ರೂ. 30—0—0
166/43	ಕಡೇಮೊಡ ಪೂವಯ್ಯ, ಬೆಳ್ಯಪ್ಪನವರ ಮಗ, ಕುಂದ ಗ್ರಾಮ, ಗೋಣಿಕೊಪ್ಪ,	ರೂ. 37—0—0
142/44	ಎ. ಕೆ. ಗೋವಾಳ್‌ಕ್ಯಷ್ಣನ್, ರಾಮನ್‌ನಾಯರರ ಮಗ ತಾವ್ಮ್ರವ್ಯಾಪಾರಿ, ಅಮ್ಮತ್ತಿ	15—0—0

ಕೆ. ಮಾಧವಪೈ,
ಏಜೆಂಟ್.

ಬ್ರಾಂಚ್ ಆಫೀಸು, ವೀರಾಜಪೇಟೆ,
ತಾ. 24—4—45.

ಶ್ರೀಶಾರದಾ ಕಾಫಿವರ್ಕ್ಸ್

ಕಾಫಿ ಬೇಳೆಯನ್ನು ಕೊಂಡುಕೊಳ್ಳುವುದಕ್ಕಿಂಥಾ
ಹುಡಿಯನ್ನು ಪಡೆದುಕೊಂಡರೆ ಪೌಂಡಿಗೆ
ಒಂದಾಣೆ ಲಾಭ ದೊರೆಯುವುದು.

15) ಕಾಫಿ ಹುಡಿ ರಾತಲು 1ಕ್ಕೆ ರೂ. 1—7—0.

ಶ್ರೀ ಶಾರದಾ ಕಾಫಿ ವರ್ಕ್ಸ್
ಮತ್ತು ಕೊಪ್ಪರ ಬಿಲ್ಡಿಂಗ್ಸ್
ಮಡಿಕೇರಿ

ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.
ಇವರ ಸಿದ್ಧೌಷಧಗಳು.

1. ನಿಕಾಫ್ ಟೂತ್ ಪೌಡರ್. ಬೆಲೆ ಪೊಟ್ಣ ಒಂದಕ್ಕೆ 0-1-0
(ಹಲ್ಲುನೋವು, ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)
2. ಪಾಮರಿ ಚೂರ್ಣ .... ಬೆಲೆ ಪೊಟ್ಣ ಒಂದಕ್ಕೆ 0-6-0
(ಕಜ್ಜಿ, ತುರಿ, ವಿಷಬು, ಇತ್ಯಾದಿ ಎಲ್ಲಾ ಚರ್ಮ ರೋಗಗಳಿಗೆ)
3. ಬಾಲವರ್ಧಿನಿ ಮಿಶ್ರಣ .... ಬೆಲೆ ಬಾಟ್ಲ ಒಂದಕ್ಕೆ 1-4-0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)
4. ದ್ರಾಕ್ಷಾರಿಷ್ಟ .... ಬೆಲೆ ಒಂದು ಬಾಟ್ಲಗೆ 2-6-0
ರಕ್ತಕಾಸೆ, ಕ್ಷಯ, ಹೃದಯ ದೌರ್ಬಲ್ಯ, ಕಾರ್ಶ್ಯಗಳಿಗೆ)
ಉಚಿತ ಕ್ಯಾಟಲಾಗಿಗೆ ಬರೆಯಿರಿ—
ಸೋಲ್ ಏಜೆಂಟ್ಸ್ (ಮೈಸೂರು ಮತ್ತು ಕೊಡಗು)
ದಿ ಆಶ್ವಿನಿ ಮೆಡಿಕಲ್ ಹಾಲ್,
10) 215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.

ಧಾತು ವೃದ್ಧಿ ರಸಾಯನ (ZANDU)
"ರ್ಯಾಕ್ಟೋ—ಫಾಸ್ಫೋ—ಮೂಲ್ಟ್"
ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳವೆ.

ಇದರಲ್ಲಿ ಇಲೆಕ್ಟ್ರಿರ್ ಫಾಸ್ಫೋಮೂಲ್ಟ್, ಹೆಮೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ಫೇಟ್ ಹೆಪ್ಟನ್, ಸಾಲ್, ಮೂಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಸಾಮಗ್ರಿಗಳಲ್ಲಿವೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
26) ಗೋಖಲೆ ರೋಡ್, ಬೋಂಬೆ.

ಜಿಲ್ಲಾ ಬೋರ್ಡು ಚುನಾವಣೆ
ಉಮೇದ್ವಾರರುಗಳು.

ಪೊನ್ನಂಪೇಟೆ— ಶ್ರೀ ಕಾಳೇಂಗಡ ಚಿಣ್ಣಪ್ಪನವರು (ಕಾಂ.)
,, ಪುಚ್ಚಿಮಾಡ ಮಾದಯ್ಯನವರು (ಸ್ವ)
ಶ್ರೀಮಂಗಲ— ,, ಅಜ್ಜಿಕುಟ್ಟಿರ ಮಾದಪ್ಪನವರು (ಕಾಂ.)
ಅವಿರೋಧವಾಗಿ ಆರಿಸಿ ಬಂದರು.
ನಾಪೋಕ್ಲು— ,, ನಡಿಕೇರಿಯಂಡ ದೇವಯ್ಯನವರು (ಕಾಂ.)
,, ಬೆಟ್ಟಿಚ್ಚೀಳಂಡ ಮಾಚಯ್ಯನವರು
ಮಾಚಯ್ಯನವರು ಇತ್ತೀಚೆಗೆ ವಾಪಸು ತೆಗೆದುಕೊಂಡರು
ವೀರಾಜಪೇಟೆ— ,, ಮಂಡೇಪಂಡ ಸೋಮಯ್ಯನವರು (ಕಾಂ.)
ಅವಿರೋಧವಾಗಿ ಆರಿಸಿ ಬಂದರು.
ಅಮ್ಮತ್ತಿ— ,, ಐನಂಡ ಕಾರ್ಯಪ್ಪನವರು (ಕಾಂ.)
ಅವಿರೋಧವಾಗಿ ಆರಿಸಿ ಬಂದರು.
ಮಡಿಕೇರಿ— ,, ಚೌರಿರ ಮಂದಣ್ಣನವರು (ಕಾಂ.)
,, ಕೆಂಬಡತಂಡ ಮೊಣ್ಣಪ್ಪನವರು (ಸ್ವ.)
ಭಾಗಮಂಡಲ— ,, ನಿಡ್ಯಮಲೆ ಸೋಮಣ್ಣನವರು (ಕಾಂ)
ಅವಿರೋಧವಾಗಿ ಆರಿಸಿ ಬಂದರು.
ಸುಂಟಿಕೊಪ್ಪ— ,, ಕೋರನ ದೇವಯ್ಯನವರು (ಕಾಂ.)
ಅವಿರೋಧವಾಗಿ ಆರಿಸಿ ಬಂದರು.
ಸೋಮವಾರಪೇಟೆ— ,, ಸಿಂಗೂರು ಮಾದಪ್ಪನವರು (ಕಾಂ.)
ಅವಿರೋಧವಾಗಿ ಆರಿಸಿ ಬಂದರು.
ಶನಿವಾರಸಂತೆ— ,, ಆಲೂರು ಮಲ್ಲಪ್ಪನವರು (ಕಾಂ.)
,, ಸಿ. ಚೆನ್ನಬಸಪ್ಪ ಶೆಟ್ಟಿಯವರು (ಸ್ವ.)
,, ಜಂಗಮ ಕರಿಬಸಪ್ಪನವರು ,,
,, ಬೆಂಬಳೂರು ಸುಬ್ಬೇಗೌಡರು ,,
,, ಕಿತ್ತೂರು ವೀರಪ್ಪನವರು ,,
ಫ್ರೇಜರ್‌ಪೇಟೆ— ,, ವಿ. ಕಾಳೇಗೌಡರು (ಕಾಂ.)
,, ವಿ. ನಾಗರಾಜುರವರು (ಸ್ವ)

ತಾ. 21-5-45 ರಲ್ಲಿ ಚುನಾವಣೆಯಾಗುವದು.

NOTICE.
INCOME-TAX.

RETURN OF TOTAL INCOME AND OF TOTAL WORLD INCOME OF THE PREVIOUS YEAR FOR ASSESSMENT IN THE YEAR COMMENCING ON 1ST OF APRIL 1945.

In pursuance of Sub-Section (1) of Section 22 of the Indian Income-tax Act 1922 (XI of 1922), notice is hereby given to EVERY PERSON whose total income during the previous year exceeded the maximum amount not chargeable to Income-tax to furnish within sixty-five days from the date of this Notice a return in the prescribed form and verified in the prescribed manner setting forth (along with such other particulars as are required by the said form) his total income and total world income during that year.

A copy of the prescribed form will be supplied free of charge to any person who, for the purpose of complying with this Notice applies at my Office.

PENALTY:—Any person who fails without reasonable cause to furnish the return required by this Notice, or fails without reasonable cause to furnish it within the time allowed or in the manner required is liable under Section 28 of the Said Act to a penalty not exceeding one and half times any tax payable by him.

T. V. Rao,
27-4-1945. INCOME-TAX OFFICER, COORG.

NOTE:—The maximum amount which is not chargeable to income-tax in the case of individual, Hindu undivided family firm, or association of persons is Rs. 2000/-. In the case of any Company or Local Authority or Non-resident is.....nil.

The Canara Banking Corporation Limited.

(Incorporated in British India Liablity of Members is Limited)

22) ESTD—1906.

Head Office: U D I P I, South Kanara.

Authorised Capital	....	Rs. 25,00,000
Issued & Subscribed Capital	....	Rs. 16,00,000
Paid up capital	....	Rs. 14,92,000
Reserves	....	Rs. 4,43,000

Total Working Capital Exceeds:

ONE CRORE & 35 LAKHS.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

26) ಪಿ. ಬಿ. ನಂ. 337, ಮದ್ರಾಸು.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

11) ಸ್ಥಾಪನೆ:—೧೮೯೭.

ಇತ್ತೀವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦	ಮೀರಿದೆ
	ಚಾಲ್ತಿಯಿರುವ ವಿಮೆ	೧೬,೪೯,೪೮,೦೦೦	,,
	ಆಸ್ತಿ	೬,೩೦,೪೬,೦೦೦	,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೩೮,೦೦,೦೦೦	,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

"ಟ್ರಾಪಿಕಲ್"

ಪಂ. ನೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಚೇರಿ: **ಹೊಸ ಡಿಲ್ಲಿ**] [ಹೆಚ್ಚಿನ ಮಾಹಿತಿಗೆ ಈ ಪತ್ರಿಕೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. **ಯಂ. ರಂಗನಾಥಶೆಟ್ಟಿ,**

8) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,000, ಜಮಾ ಬಂದ ಠೇವಣಾತಿ 2,24.750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಮದುವೆ ಮತ್ತು ಮೂಢನಂಬಿಕೆ.

(ಬರೆದು ಬಂದದ್ದು.)

ಕುಡುಕತನವು ಕೊಡಗಿನ ಸಾಮಾಜಿಕ, ಆರ್ಥಿಕ, ಮತ್ತು ನೈತಿಕ ದೃಷ್ಟಿಯಿಂದ ಸೂರೆಮಾಡುತ್ತಿರುವ ಈ ಸಮಯದಲ್ಲಿ ಈ ದುರಭ್ಯಾಸವನ್ನು ನಿಲ್ಲಿಸಲು ಹಲವಳು ಪ್ರಯತ್ನಿಸುತ್ತಿರುವದೂ ಶುಭ ಚಿಹ್ನೆ. ಅನೇಕ ಗ್ರಾಮಗಳು ಕುಡುಕತನವನ್ನು ನಿಲ್ಲಿಸುವ ತೀರ್ಮಾನ ಮಾಡಿಕೊಂಡಿವೆ. ಅನೇಕ ಕುಟುಂಬಗಳು ತಮ್ಮ ಕುಟುಂಬಗಳಲ್ಲಿನ ಲಗ್ನ, ಹಬ್ಬ, ಉತ್ಸವಗಳಿಗೆ ಮಾದಕ ಪಾನೀಯ ಸೇರಿಸುವದನ್ನು ಮನ್ನಾಮಾಡಿವೆ. ಆದರೆ 'ಲೋಕೋ ಭಿನ್ನ ರುಚಿ' ಎಂಬಂತೆ ಕೆಲವರು ಈ ರೀತಿ ಸಮಾಜಸೇವೆಗೆ ತೊಡಗಿದ್ದರೆ ಇನ್ನು ಕೆಲವರು ಇವರಿಗೆ ವಿರೋಧಿಸಿ ನಿಶಾಸೇವನೆಗೆ ಬಹಿರಂಗವಾಗಿ ಉತ್ತೇಜನ ಕೊಡುತ್ತಿದ್ದಾರೆ ಉದಾಹರಣೆಯನ್ನು ಕೊಡುವದಾದರೆ ತಾ. 22-4-45 ರಲ್ಲಿ ದಿವಂಗತ ಚೆಪ್ಪುಡೀರ ಪೂವಯ್ಯನವರ ಪುತ್ರ ಚಿಣ್ಣಪ್ಪನವರ ಮದುವೆಯು ಮಡಿಕೇರಿಯಲ್ಲಿ ನಡೆಯಿತು. ಈ ಮದುವೆಗೆ ಮಾದಕ ಪದಾರ್ಥ ಸೇರಿಸುವ ವರ್ತಮಾನವಿದ್ದುದರಿಂದ ಮಡಿಕೇರಿಯ ಕೆಲವು ಸಮಾಜಸೇವಕರು ಆತರಲ್ಲಿಗೆ ಹೋಗಿ ಆವರ ಹಿರಿಯರಲ್ಲಿ ಮಾದಕಪದಾರ್ಥ ಸೇರಿಸಿ ಸಮಾಜಕ್ಕೆ ಹಾನಿಕರವಾದ ಉದಾಹರಣೆಯನ್ನು ಹಾಕಬಾರದಾಗಿ ಬೇಡಿಕೊಂಡರು ಹೀಗೆ ಮದುವೆಗೆ ಕೆಲವು ದಿನಗಳಿಗೆ ಮೊದಲು ಒಂದೆರಡು ಬಾರಿ ಕೇಳಿಕೊಂಡರೂ ಅವರು ಈ ಮಾತುಗಳನ್ನು ಗಮನಿಸದೆ ತಮ್ಮ ಕಾರ್ಯದಲ್ಲಿ ಪ್ರವೃತ್ತರಾದರು. ಮದುವೆಯ ದಿವಸವೂ ಈ ಸಮಾಜಸೇವಕರು ಮೂಹೂರ್ತದ ನಂತರ ಮತ್ತೊಂದು ಆಫೀಲನ್ನು ಮಾಡಿಕೊಂಡರು. ಕಡಿಮೆ ಪಕ್ಷ ಊಟದ ಸಭೆಯಲ್ಲಿ ಮಾದಕ ಪದಾರ್ಥವನ್ನು ನುಸ್ಸುಮಾಡಬೇಕೆಂದು ಅಡ್ಡಬಿದ್ದು ಬೇಡಿಕೊಂಡರು. ಆದರೂ ಅವರು ಗಮನಿಸದೆ ಕಾರಣ ಅಲ್ಲಿ ನೆರೆದಿದ್ದವರ ಹೃದಯಪರಿವರ್ತನೆ ಮಾಡುವ ಉದ್ದಿಶ್ಯ ಈ ಹಿರಿಯರ ಕಾಲುಹಿಡಿದು ನಿಶಾಸೇವನೆಗೆ ವಿರುದ್ಧವಿದ್ದ 21 ಜನರು ನೆಂಟರಿಸ್ಟರು ಊಟಮಾಡದೆ ಮಂಟಪದಿಂದ ಹೊರಟು ಬರಬೇಕಾಯಿತು. ಮಾನವ ಸಮಾಜದಲ್ಲಿ ಗೌರವ ಯಾವುದಕ್ಕೆ? ಮಾನವ ವ್ಯಕ್ತಿಗೋ ಯಾ ಮಾದಕ ಪದಾರ್ಥಕ್ಕೋ? ಮಾನವ ವ್ಯಕ್ತಿಯನ್ನು, ನೆಂಟರಿಷ್ಟರನ್ನು, ಸ್ನೇಹಿತರನ್ನು ಬಿಟ್ಟು ಕೇವಲ ನಿಪಾಸೇವನೆಗೆ ಅವಕಾಶ ಕೊಟ್ಟದ್ದು ಅದೆಷ್ಟು ಹೃದಯದ್ರಾವಕವಾದುದು.

ಈ ಘಟನೆಯಿಂದಾಗಿ ನಾನಾರೀತಿಯ ಚರ್ಚೆಗಳು ಎದ್ದಿವೆ. ಕೆಲವರು ಈ ಕಾರ್ಯಕ್ರಮದಿಂದ ಏನು ಸಾಧಿಸಿದಂತಾಯಿತು? ಎಂದು ಕೇಳುತ್ತಿದ್ದಾರೆ. ಸಾಧಿಸಿದ ವಿಚಾರವೇನೂ ಈಗ ಕಣಿಗೆ ಕಾಣದಿದ್ದರೂ ಮುಂದೆ ಇದರಿಂದ ಹೆಚ್ಚಿನ ಪರಿಣಾಮ ಆಗಲಿದೆ.

ಯಾವನೇ ವಯಸ್ಕನಾಗಲೀ ಒಂದು ಮದುವೆ, ಹಬ್ಬ, ಉತ್ಸವಗಳನ್ನು ಮಾಡುವದು ತನ್ನ ಸ್ನೇಹಿತರಾದ ನಾಲ್ಕಾರು ಜನರನ್ನು ಕರೆಸಿ ಆದರ ಸತ್ಕಾರಮಾಡಿ ಆದರಿಂದ ತಾನೂ ಸಂತೋಷಗೊಳ್ಳಲಿಕ್ಕಾಗಿ. ಆದರೆ ಸಮಾಜ ಘಾತುಕ ಕಾರಣವಾದ ನಿಶಾಸೇವನೆಗಾಗಿ ಈ ಸಂತೋಷವನ್ನು ಬಲಿಕೊಡುವ ಜನರು ಇದ್ದಾರೆಂಬುದು ವ್ಯಸನದ ಮಾತು. ಮೇಲಿನ ಉದಾಹರಣೆಯನ್ನೇ ತೆಗೆದುಕೊಂಡರೆ ಮದುವೆಯಿಂದ ಹೊರಟು ಹೋದ ಜನರನ್ನು ಬಿಟ್ಟು ಭೋಜನಮಾಡಿದ ಆ ಸಭೆಯಲ್ಲಿ ಒಂದು ರೀತಿಯ ಚಿಂತೆ ಇದ್ದೇ ಇದ್ದಿರಬೇಕು. ಅಲ್ಲಿ ಉಳಿದಿದ್ದವರೂ ಮನುಷ್ಯರೇ ಆದ ಕಾರಣ ಅವರ ಹೃದಯವು ಆ ಘಟನೆಯಿಂದ ವಿಮುಖರಿರಲೇಬೇಕು. ತಮ್ಮ ಸಹೋದರರಲ್ಲಿ ಕೆಲವರನ್ನು ಬಿಟ್ಟು ಇದರ ಬದಲು ನಿಶಾದೇವಿಯನ್ನು ಸ್ವಾಗತಿಸಿದ ಸಭೆಯ ದೃಶ್ಯವನ್ನು ಒಂದೆಡೆ ಚಿತ್ರಿಸಿರಿ. ಪುನಹ ಅದೇ ನಿಶಾ ಪದಾರ್ಥವನ್ನು ಮನ್ನಾಮಾಡಿ ಸಭೆತ್ಯಾಗಕ್ಕೆ ಅವಕಾಶಕೊಡದೆ ಎಲ್ಲರೂ ಸಮ್ಮಿಳಿತರಾಗಿ ಊಟಮಾಡುವ ದೃಶ್ಯವನ್ನು ಮತ್ತೊಂದೆಡೆ ಚಿತ್ರಿಸಿರಿ. ಯಾವುದು ಹೆಚ್ಚು ಆಕರ್ಷಣೀಯ? ಯಾವುದು ಮಾನವ ಕುಲದ ಅಭಿವೃದ್ಧಿಗೆ ಯೋಗ್ಯವಾದುದು?

ಮಾದಕ ಪದಾರ್ಥ ಸೇರಿಸುವದರ ವಿರುದ್ಧ ಇಷ್ಟು ಪ್ರೀತಿಯ ಬೇಡಿಕೆ ಮಾಡಿದ್ದು ಈ ಸಮಾಜಸೇವಕರ ಸ್ವಾರ್ಥಕ್ಕಾಗಿ ಅಲ್ಲ; ಇಲ್ಲವೇ ಬೇರೆ ಲಾಭದ ದೃಷ್ಟಿಯಿಂದಲ್ಲ. ಕುಡುಕತನದಿಂದ ಕಂಗಾಲಾಗಿ ಕಳವಳಪಡುತ್ತಿರುವ ಸಮಾಜದ ಉದ್ಧಾರಕ್ಕಾಗಿ. ಕೊಡಗೇನಾಡಿನಲ್ಲಿ ನಿಜವಾದ ಸಂಸ್ಕೃತಿ ಇರುವದಾದರೆ, ಕೊಡಗು ಕುಡುಕತನದಂಥ ಅಳಿಗಾಲದಿಂದ ಉಳಿಯಬೇಕೆನ್ನುವ ಕಳಕಳಿ ಕೊಡಗಿನವರಿಗೆ ಇರುವದಾದರೆ ಉದಾತ್ತ ಮಾದರಿಯನ್ನು ಪ್ರಾಕಿಕೊಟ್ಟ ಮಡಿಕೇರಿಯ ಸಮಾಜಸೇವಕರಿಗೆ ಇಡೀ ಕೊಡಗು ನಾಡಿನ ಬೆಂಬಲ ದೊರೆಯಬೇಕು. ಈ ಉತ್ತಮ ಮಾದರಿಯನ್ನು ಎಲ್ಲೆಲ್ಲೂ ಸಮಾಜ ಹಿತಚಿಂತಕರು ಅನುಸರಿಸಬೇಕು. ಸಮಾಜದ ಮುಂದಾಳುಗಳು, ಧನಿಕರು ಮತ್ತು ಬುದ್ಧಿವಂತರು ತಮ್ಮ ಉತ್ತಮ ಉದಾಹರಣೆಗಳಿಂದ ಸಮಾಜದ ಅಭಿವೃದ್ಧಿಗೆ ಯತ್ನಿಸಬೇಕು.

Edited, Printed and Published by P. I. Belliappa, at 'Kodagu' Press, Mercara, for 'Kodagu' Ltd.